# ಹೇಳಬಾರದೆ ಬುದ್ಧಿಯ ಮಗನ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 71.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 621.
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 109.
4. **Note:** Lyrics mentioned in yellow highlights are as per Ref. 1 and the lyrics given without highlights are as per Ref. 2. The wordings in Ref. 3 are same as in Ref. 2.

| | |
|---|---|
| ರಾಗ: ಕಲ್ಯಾಣಿ ತಾಳ: ಅಟ | ರಾಗ: ಕಲ್ಯಾಣಿ ತಾಳ: ಅಟ |
| | |
| ಹೇಳಬಾರದೆ ಬುದ್ಧಿಯ, ನಿನ್ನ ಮಗನ | ಹೇಳಬಾರದೆ ಬುದ್ಧಿಯ - ಮಗನ ಊರ- |
| ಊರುಗೂಳಿಯ ಮಾಡಿದೇವೆ \|\| ಪ \|\| | ಗೂಳಿಯ ಮಾಡಿದ್ದೇನೆ ? |
| | |
| ಒಣೋಣಿಗುಂಟೆ ವಾರಿಗೆಯರ ಕೂಡಿ | ಮೇಳದಿ ಓರಗೆಯವರ ಕೂಡಿಕೊಂಡು |
| ಗೋವಳೇರ ಕೇರಿ ಹಾಳು ಮಾಡುತಿದ್ದಾನೆ \|\| ಅಪ \|\| | ಹಾಳು ಮಾಡುತಾನೆ ಗೋವಳಗೇರಿಯ |
| | |
| ಅಟ್ಟದ ಮೇಲಿಟ್ಟ ಚಿಟ್ಟಿಗೆ ಹಾಲಲಿ | ಅಟ್ಟದ ಮೇಲಿಟ್ಟಿಹ - ಚಟ್ಟಿಗೆ ಹಾಲು |
| ಬೊಟ್ಟನಿಕ್ಕಿ ಚೀಪುವ | ಬಟ್ಟನಿಕ್ಕಿ ಚೀಪುವ |
| ದುಷ್ಟತನ ಮಾಡಬೇಡವಯ್ಯಾವೆನ್ನೆ | ದುಷ್ಟತನವ ಮಾಡಬೇಡ ಅಯ್ಯಾ ಎನೆ |
| ಕಷ್ಟವೇನೆನುತಲಿ ಮುದ್ದಿಟ್ಟು ಓಡಿದ \|\| 1 \|\| | ಕಷ್ಟವೇನೆಂಬೆ ಮುದ್ದಿಟ್ಟು ಓಡಿ ಪೋದ |
| | |
| ಮೊಸರ ಶೋಧಿಸುತಿರಲು ಬಂದು ಕುಳಿತ | ಮೊಸರ ಮಥಿಸುತಿರಲು – ಬಂದು ಕುಳಿತ |
| ಹಸುಗೂಸು ಎನುತಿದ್ದೇನೆ | ಹಸುಗೂಸು ಎನುತಿದ್ದೇನೆ |
| ಕುಸುಮನಾಭ ತನ್ನ ವಶವಾಗು ಎನುತಲಿ | ಕುಸುಮನಾಭನು ತನ್ನ ವಶವಾಗು ಎನುತಲಿ |
| ಮುಸುಕು ತೆಗೆದು ಕುಚ ಹಿಚಿಕಿ ಪೋದನಲ್ಲೆ \|\| 2 \|\| | ವಸನ ತೆಗೆದು ಮೊಲೆ ಪಿಡಿದು ಹೋದಮೇಲೆ |
| | |
| ಬೆಣ್ಣೆಯ ಕಂಡರಂತು ಅದರ ರೂಪ | ಬೆಣ್ಣೆಯ ಕಂಡರಂತೂ – ಅದರ ರೂಪ |
| ಕಣ್ಣಿಗೆ ತೋರನಲ್ಲ | ಕಣ್ಣಿಗೆ ತೋರನಲೆ |
| ಸಣ್ಣವನೆಂದು ನಾ ಬಾಯೆಂದು ಕರೆದರೆ | ಸಣ್ಣವನೆಂದು ಬಗೆದು ನಾ ಕರೆದರೆ |
| ಬಣ್ಣಿಸಿ ಮಾತಾಡಿ ಬಾರೆಂದು ಕರೆದನೆ \|\| 3 \|\| | ಬಣ್ಣದ ಮಾತಾಡಿ ಬಾ ಎಂದು ಕರೆವನು |
| | |
| ಉಡುವ ಸೀರೆಯ ಕಳೆದು ತಡಿಯಲ್ಲಿಟ್ಟು | ಉಡುವ ಸೀರೆಯ ಕಳೆದು – ತಡಿಯಲಿಟ್ಟು |

ಮಡುವಿನೊಳು ಮೈ ತೊಳೆಯೆ
ಧಡಧಡ ಬಂದೊಂದು ಕಡಹದ ಮರನೇರಿ
ಕೊಡು ಕೃಷ್ಣಾ ಎನುತಿರೆ ಪಿಡಿ ಜೋಡು ಕೈಯೆಂಬ || 4 ||

ಎಷ್ಟು ಹೇಳಲಿ ಯಶೋದೆ ನಿನಗೆ ಒಂ-
ದಿಷ್ಟು ಕರುಣವಿಲ್ಲವೇನೆ
ಸೃಷ್ಟಿಗೊಡೆಯ ನಮ್ಮ ಪುರಂದರ ವಿಠಲನ್ನ
ಎಷ್ಟು ಹೇಳಲಿ ಇನ್ನು ಆದ್ದಷ್ಟು ನಿನ್ನ ಮುಂದೆ || 5 ||

ಮಡುವಿನೊಳ್ ಮೈದೊಳೆಯೆ
ದಡದಡ ಬಂದೊಯ್ದು ಕಡಹದ ಮರವೇರಿ
ಕೊಡು ಕೃಷ್ಣ ಎನುತಿರೆ ಪಿಡಿ ಜೋಡು ಕೈಯೆಂಬ

ಎಷ್ಟು ಹೇಳಲಿ ನಿನಗೆ – ಯಶೋದೆ ಒಂ-
ದಿಷ್ಟು ಕರುಣವಿಲ್ಲವೆ
ಸೃಷ್ಟಿಗೊಡೆಯ ನಮ್ಮ ಪುರಂದರ ವಿಠಲ
........................................................ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಮತ್ತೊಬ್ಬ ಗೋವಳಿತಿಯ ದೂರು.

**ಮೇಳದಿ** = ಗುಂಪು ಕಟ್ಟಿಕೊಂಡು

**ಕಡಹದ ಮರ** – ಕಡಂಬ; ಕದಂಬ ಮರ; ಯಮುನಾ ತೀರದಲ್ಲಿ ಬೆಳೆಯುವ ನೀಪವೃಕ್ಷ.

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** buddi, maga, ooru, gULi, govu, halu, koosu, benne, kannu, Krishna, mara, kai, yashode, karuna,
**Pravachana:** NA
**Explanation:** NA